

ಸುಮಾರು 80 ಎಕರೆ ಪ್ರದೇಶದಲ್ಲಿ ಕಟ್ಟಲಾಗಿರುವ ಈ ಅರಮನೆಯ ವಿಸ್ತೀರ್ಣ 3300 ಚದರ ಮೀಟರ್. ಹಲವಾರು ಬೇರೆ ಬೇರೆ ಕಟ್ಟಡಗಳನ್ನು ಕಟ್ಟಿ ಅವುಗಳನ್ನು ಒಂದಕ್ಕೊಂದಕ್ಕೆ ಜೋಡಿಸಲಾಗಿದೆ. ಮರಗಳಿಂದಲೇ ಕಟ್ಟಿರುವ ಈ ಕಟ್ಟಡಗಳಲ್ಲಿ ಅತ್ಯಂತ ಸೂಕ್ಷ್ಮವಾದ ಕುಸುರಿ ಕೆತ್ತನೆಗಳನ್ನು ಮಾಡಲಾಗಿದೆ. ಹಲವಾರು ಕಡೆಗಳಲ್ಲಿ ಗೋಡೆಗಳಿಗೆ ಚಿನ್ನದ ತಗಡಿನ ಲೇಪನವನ್ನು ಮಾಡಲಾಗಿದೆ. ಮಹಾರಾಜನನ್ನು ಭೇಟಿ ಮಾಡಲು ಬರುವಂತಹ ಜನರಿಗೆ ಅವರವರ ಅಂತಸ್ತಿನಂತೆ ಬೇರೆ ಬೇರೆ ವಿಶಾಲವಾದ ಕೋಣೆಗಳನ್ನು ನಿರ್ಮಿಸಲಾಗಿದೆ.

ಇಲ್ಲಿನ ವೈಶಿಷ್ಟ್ಯವೆಂದರೆ, ಪ್ರತಿಯೊಂದು ಕೋಣೆಯಲ್ಲಿನ ಗೋಡೆಗಳು ಹಾಗೂ ತಾರಸಿಯ ಮೇಲೆ ಮಾಡಿರುವ ಪೈಂಟಿಂಗ್‌ಗಳ ಕೆಲಸ. ಕೆಲವು ಗೋಡೆಗಳ ಮೇಲೆ ಪ್ರಾಣಿಗಳ ಪೈಂಟಿಂಗ್ ಇದ್ದರೆ, ಕೆಲವು ಗೋಡೆಗಳ ಮೇಲೆ ಪಕ್ಷಿಗಳು, ಜಲಚರಗಳಿವೆ. ಇಲ್ಲಿ ಸುಮಾರು ಹದಿನೈದು ವಿಧವಿಧದ ಕೋಣೆಗಳಿವೆ. ಈ ಕೋಣೆಗಳಲ್ಲಿ ಯೆಲ್ಲೋ ರೂಂ, ಯಂಗ್ ಪೈನ್ ರೂಂ, ರಿಟೇನರ್ ರೂಂ, ಮಂತ್ರಿಗಳ ಕೊಠಡಿ, ರಾಜದೂತರ ಕೊಠಡಿ, ಮಹಾರಾಜರ ಕೊಠಡಿ, ಅಲ್ಲದೇ ರಾಜರಾಣಿಯರು ಮಲಗುವ ಕೋಣೆ, ಅಂಗರಕ್ಷಕರ ಕೋಣೆಗಳಿವೆ. ಈ ಎಲ್ಲಾ ಕೋಣೆಗಳ ತಾರಸಿಗಳ ಒಳಭಾಗದಲ್ಲಿರುವ ಚಿತ್ತಾಕರ್ಷಕ ಪೇಂಟಿಂಗ್‌ನಿಂದಲೇ ಪ್ರಸಿದ್ಧಿ ಹೊಂದಿದೆ.

ನೀಜೋ ಅರಮನೆಯ ಮುಖ್ಯ ಆಕರ್ಷಣೆ ಅಲ್ಲಿನ ನೆಲಹಾಸು. ಮರದಿಂದ ಮಾಡಿರುವ ಈ ನೆಲಹಾಸಿನ ಮೇಲೆ ಯಾರೇ ನಡೆದರೂ ಪಕ್ಷಿಗಳು ಕೂಗುವ ಚಿಲಿಪಿಲಿ ಕಲರವ ಕೇಳುತ್ತದೆ! ಹೀಗಾಗಿ ಈ ಅರಮನೆಯಲ್ಲಿ ಪಾದರಕ್ಷೆಗಳನ್ನು ಹಾಕಿಕೊಂಡು ಹೋಗುವ ಹಾಗಿಲ್ಲ. ಬರಿಗಾಲಿನಲ್ಲೇ ನಡೆಯಬೇಕು. ಕ್ಯೋಟೋ ನಗರದಲ್ಲಿ ನಾವು ನೋಡಿದ ಈ ಮೂರೂ ಪ್ರಮುಖ ಆಕರ್ಷಣೆಗಳನ್ನು ಯುನೆಸ್ಕೋದ ವಿಶ್ವ ಪಾರಂಪರಿಕ ಸ್ಥಳಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಕ್ಯೋಟೋದಲ್ಲಿ ಇನ್ನೂ ಹದಿನೇಳು ವಿಭಿನ್ನ ದೇಗುಲಗಳು ಹಾಗೂ ಉದ್ಯಾನವನಗಳು ವಿಶ್ವಪಾರಂಪರಿಕ ಪಟ್ಟಿಯಲ್ಲಿವೆ.

ಟೋಕಿಯೋದಿಂದ ಕ್ಯೋಟೋಗೆ ಬುಲೆಟ್ ಟ್ರೈನ್ ಪ್ರಯಾಣ. ಗಂಟೆಗೆ ಸುಮಾರು 300 ಕಿ.ಮೀ ವೇಗ. ಓಸಾಕದಿಂದಲೂ ರಸ್ತೆಯ ಮೂಲಕ ಎರಡು ಗಂಟೆಯ ಪ್ರಯಾಣ. ಇಲ್ಲಿಯ ಪ್ರವಾಸಕ್ಕೆ ಮಾರ್ಚ್ – ಮೇ ತಿಂಗಳು ಪ್ರಶಸ್ತ. ಆನಂತರ ಮಳೆ ಶುರುವಾಗುತ್ತದೆ. ಜಪಾನಿನ ಪ್ರಮುಖ ಬುದ್ಧ ದೇವಾಲಯಗಳಲ್ಲಿ ಜಿಂಕೆಗಳನ್ನು ಸಾಕುವುದು ವಿಶೇಷ.




ಬದುಕೇ ಬರಡಾಗಿ ಸಮಸ್ಯೆಗಳೇ ಸುಳಿಯಾಗಿ ಸಂಭ್ರಮವೇ ಇಲ್ಲದೆ ಬದುಕಲ್ಲಿ ಸಂತಸ ತರಲು ನಿಮ್ಮ ಪಾಲಿಗೆ ತೆರೆದಿದೆ ಭರವಸೆಯ ಬಾಗಿಲು ಅದೇ

**ಶ್ರೀಲಕ್ಷ್ಮೀ ನರಸಿಂಹ ಆಸ್ಟ್ರೋ ಸೆಂಟರ್**

ಶಿರೋಮಣಿ **ಪಂ|| ಪಾಂಡುರಂಗ ಜೋಷಿರವರು**
ವಂಶ ಪಾರಂಪರ್ಯ ಜ್ಯೋತಿಷ್ಯರು

ಶತಮಾನದ ಇತಿಹಾಸದಲ್ಲಿ ಉದ್ದಕ್ಕೂ ಸಮಸ್ಯೆಗಳ ನಡುವೆ ಮನುಷ್ಯನಲ್ಲಿ ಭರವಸೆಯಾಗಿ ಉಳಿದಿದ್ದು ನಮ್ಮ ಜ್ಯೋತಿಷ್ಯ ಶಾಸ್ತ್ರ, ಅಂತ ಜ್ಯೋತಿಷ್ಯ ಶಾಸ್ತ್ರದ ಪ್ರಾವಿಣ್ಯತೆ ಪಡೆದ ಕೆಲವೇ ಪಂಡಿತರ ಸಾಲಲ್ಲಿ ನಮ್ಮ ಜ್ಯೋತಿಷ್ಯ ಪಂಡಿತರು ಹಲವಾರು ವರ್ಷಗಳಿಂದ ಎಲ್ಲರ ಸಮಸ್ಯೆಗಳಿಗೆ ನಿಖರ ಪರಿಹಾರ ನೀಡುತ್ತಿರುವರು.

ಇವರು ನಿಮ್ಮ ಜಾತಕ, ಹಸ್ತರೇಖೆ, ಮುಖಲಕ್ಷಣ ಸ್ವರತರಂಗಗಳ ಮುಖಾಂತರ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಆರೋಗ್ಯ ಮನೆಯಲ್ಲಿ ಕಿರಿಕಿರಿ ಮದುವೆಯಲ್ಲಿ ವಿಳಂಬ, ಸಂತಸದಲ್ಲಿ ತೊಂದರೆ ಸಾಲಬಾಧೆ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ ಹಾಗೂ ನಿಮ್ಮ ಮನಸ್ಸಿನಲ್ಲಿ ಯಾವುದೇ ಗುಪ್ತಸಮಸ್ಯೆಗಳಿಗೆ ಶೀಘ್ರ ಪರಿಹಾರ ತಿಳಿಸುತ್ತಾರೆ.

**ವಿಶೇಷ ಸೂಚನೆ:** ಮದುವೆ ಸಾಲಾವಳಿ, ಮನೆಯ ವಾಸ್ತು, ಸ್ತ್ರೀಪುರುಷ ವಶೀಕರಣ, ಮಾಟ-ಮಂತ್ರಗಳಿಗೆ ವಿಶೇಷ ಶಾಸ್ತ್ರೋಕ್ತ ಪರಿಹಾರವನ್ನು ಶೀಘ್ರದಲ್ಲಿ ಸೂಚಿಸುತ್ತಾರೆ.

ಫೋನಿನ ಮೂಲಕ ನಿಮ್ಮ ಸಂದರ್ಶನವನ್ನು ಖಚಿತ ಪಡಿಸಿಕೊಳ್ಳಿ.
**9663606675**

**ಮನೆವಿಳಾಸ:** #409, 2ನೇ ಕ್ರಾಸ್, ಆರ್.ಟಿ.ನಗರ ಮೈನ್ ರೋಡ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಪಕ್ಕ, ವಿಷ್ಣುಗಾರ್ಡನ್ ಹೋಟೆಲ್ ಎದುರು, ಆರ್.ಟಿ.ನಗರ, ಬೆಂಗಳೂರು.